ಶ್ರೀ ಟಿ. ಚನ್ನಯ್ಯ.—ಸಾಮಾನ್ಯವಾಗಿ ಪ್ರತಿಯೊಂದು ಗ್ರಾಮಕ್ಕೂ ಒಂದು ಆಸ್ಪತ್ರೆ ಬೇಕು ಎಂದು ಕೇಳುತ್ತಾರೆ. ಆದರೆ ಆ ರೀತಿ ಮಾಡುವುದಕ್ಕಾಗುವುದಿಲ್ಲ. ಎಲ್ಲೆ ಹತ್ತಿಪ್ಪತ್ತು ಮೈಲಿಗಳು ಹೋದರೂ ಆಸ್ಪತ್ರೆ ಯಿಲ್ಲದೆ ಇದ್ದು, ಒಂದು ಊರಿಗೆ ಒಂದು ಆಸ್ಪತ್ರೆ ಕೊಟ್ಟರೆ ನುತ್ತಮುತ್ತ ಇಪ್ಪತ್ತು-ಮೂವತ್ತು ಗ್ರಾಮಗಳಿಗೆ ಅನುಕೂಲವಾಗುತ್ತದೆಂದು ಕಂಡುಬರುತ್ತದೋ ಅಂಥ ಊರಿಗೆ ಆಸ್ಪತ್ರೆ ಕೊಡುತ್ತೇವೆ.

Taluk Advisory Committees.

Q.—157. **Sri S. H. THAMMAIAH** *alias* **HANUMANTHEGOWDARA THAMMIAH** (Krishnarajanagar).—

Will the Government be pleased to state :—

(*a*) the principles and manner on which the Taluk Advisory Committees have been constituted in the State ;

(*b*) by whom the names of members were suggested or recommended to these committees ;

(*c*) whether the system of nomination is in consonance with the principles of democracy ?

A.—**Sri T. CHANNIAH** (Minister for Public Health and Local Self-Government).—

(*a*) Please see Government Order No. L.B. 4112-41—L.D.W. 3-55-1 dated 2nd August 1955.

(*b*) Suggestions were called for from local officers and then a selection was made.

(*c*) This is a matter of opinion.

ಶ್ರೀ ಎಸ್. ಎಚ್. ತಮ್ಮಯ್ಯ.—ಈ ತಾಲ್ಲೂಕು ಸಲಹಾ ಸಮಿತಿಗಳನ್ನು ಸಂಸ್ಥಾನದಲ್ಲಿ ನೇಮಕ ಮಾಡಿರತಕ್ಕದ್ದರ ಬಗ್ಗೆ ಇದರಲ್ಲಿ ಸದಸ್ಯರಾಗಿರಲು ಪ್ರೌರನಭೆಯ ಸದಸ್ಯರಿಗಾಗಲಿ ಅಥವಾ ಅಧ್ಯಕ್ಷರಿಗಾಗಲಿ ತಾವು ಎಲ್ಲಾದರೂ ಅವಕಾಶ ಕೊಟ್ಟಿದ್ದೀರಾ ?

ಶ್ರೀ ಟಿ. ಚನ್ನಯ್ಯ.—ಹಾಗೆ ಪ್ರೌರನಭೆಯ ಸದಸ್ಯರುಗಳನ್ನು ಈ ಸಮಿತಿಗೆ ನಾಮಿನೇಟ್ ಮಾಡಕೂಡದು ಎನ್ನತಕ್ಕದ್ದೇ ಸರ್ಕಾರದವರ ಉದ್ದೇಶ.

ಶ್ರೀ ಎಸ್. ಎಚ್. ತಮ್ಮಯ್ಯ.—ಆದರೆ ಕೆಲವು ಕಡೆ ಉದ್ದೇಶ ಪೂರ್ವಕವಾಗಿಯೇ ಕೆಲವು ಕೋಮಿನವರನ್ನು ಬಿಟ್ಟುಬಿಡಲಾಗಿದೆಯೆಂಬ ಅಂಶ ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.—ಯಾವ ಉದ್ದೇಶವನ್ನೂ ಹಾಗೆ ಇಟ್ಟುಕೊಂಡು ಮಾಡಿಲ್ಲ. ಲೋಕಲ್ ರೆಪ್ರಸೆಂಟೆಟೀವ್‌ಗಳಿಂದ ಹೆಸರುಗಳನ್ನು ತರಿಸಿಕೊಂಡು ಅವರನ್ನು ನಾಮಿನೇಟ್ ಮಾಡಿದ್ದೇವೆ.

ಶ್ರೀ ಎಸ್. ಎಚ್. ತಮ್ಮಯ್ಯ.—ಕೃಷ್ಣರಾಜಪೇಟೆ ತಾಲ್ಲೂಕಿನಲ್ಲಿ ಕುರುಬರ ಜನಾಂಗ ಜಾಸ್ತಿಯಾಗಿದ್ದಾಗ್ಗೂ ಅವರಿಗೆ ಒಂದಾದರೂ ಪ್ರಾತಿನಿಧ್ಯವನ್ನು ಈ ಸಮಿತಿಯಲ್ಲಿ ಕೊಟ್ಟಿಲ್ಲ ಎನ್ನುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.—ತಾಲ್ಲೂಕು ಅಡ್ವೈಜರಿ ಸಮಿತಿಗಳನ್ನು ನೇಮಕ ಮಾಡತಕ್ಕ ವಿಚಾರದಲ್ಲಿ ಆ ರೀತಿಯಾಗಿ ನಾವು ಯಾವ ಒಂದು ನೀತಿಯನ್ನೂ ಇಟ್ಟುಕೊಂಡಿಲ್ಲ. ಆ ರೀತಿ ಕೋಮುವಾರು ಭಾವನೆ ಇಟ್ಟುಕೊಂಡು ಸಮಿತಿಗಳನ್ನು ರಚಿಸುವುದು ನೂಕ್ಕಪೂ ಅಲ್ಲ.

Taluk Advisory Committees (Nomination of Chairman).

Q.—173. **Sri A. MUNIYAPPA** (Chikballapur - Sidlaghatta—Scheduled Castes).—

Will the Government be pleased to state :—

(*a*) whether they have ascertained the opinion of the taluk leaders before nominating the Taluk Advisory Committees ;

(*b*) whether there are any strong reasons for not nominating the Chairmen of these committees ?

A.—**Sri T. CHANNIAH** (Minister for Public Health and Local Self-Government).—

(*a*) Yes.

(*b*) Government think that permanent chairmen are not necessary and propose to try the present arrangement for some time.

ಶ್ರೀ ಎ. ಮುನಿಯಪ್ಪ.—ತಾವು ಈಗ ತಾನೆ ಈ ಸಮಿತಿಗಳನ್ನು ನೇಮಕ ಮಾಡತಕ್ಕ ಸಂದರ್ಭದಲ್ಲಿ ಆಯಾಯ ತಾಲ್ಲೂಕು ಮುಖಂಡರುಗಳನ್ನು ಕೇಳಿ ಮಾಡಿದ್ದೇವೆ ಎಂದು ಉತ್ತರ ಕೊಡೋಣವಾಯಿತು. ಹಾಗಾದರೆ ತಾವು ಶಿಡಲಘಟ್ಟ ಮತ್ತು ಚಿಕ್ಕಬಳ್ಳಾಪುರ ತಾಲ್ಲೂಕುಗಳಲ್ಲಿ ಮುಖಂಡರುಗಳು ಯಾರೆಂಬುದನ್ನು ಹೇಳುತ್ತೀರಾ ?

ಶ್ರೀ ಟಿ. ಚನ್ನಯ್ಯ.—ಈಗ ಸದ್ಯಕ್ಕೆ ಅಲ್ಲಿಗೆ ತಾವೇ ಮುಖಂಡರು.

ಶ್ರೀ ಎ. ಮುನಿಯಪ್ಪ.—ಹಾಗಿದ್ದರೆ ನಮ್ಮನ್ನು ಕೇಳದೆ ಅವರು ಆ ಸಮಿತಿಗಳನ್ನು ರಚಿಸಿದ್ದಾರೆಂದು ಹೇಳಿದರೆ ತಾವು ಒಪ್ಪುತ್ತೀರಾ ?

ಶ್ರೀ ಟಿ. ಚನ್ನಯ್ಯ.—ನಾವು ಸಾಮಾನ್ಯವಾಗಿ ಈ ಸಮಿತಿಗಳ ನೇಮಕದ ಸಂಬಂಧದಲ್ಲಿ ಆಯಾ ಲೋಕಲ್ ಆಫೀಸರುಗಳ ಮತ್ತು ಕಾಂಗ್ರೆಸ್ ಮುಖಂಡರುಗಳಿಂದ ಹೆಸರುಗಳನ್ನು ತರಿಸಿಕೊಂಡು ಮಾಡಿದ್ದೇವೆ. ಆದರೆ ಈ ಸಂದರ್ಭದಲ್ಲಿ ಬಹುಶಃ ತಮ್ಮನ್ನು ಕೇಳಿಲ್ಲದೆ ಇರಬಹುದು.

ಶ್ರೀ ಎ. ಮುನಿಯಪ್ಪ.—ಆ ಶಿಡಲಘಟ್ಟ, ಚಿಕ್ಕಬಳ್ಳಾಪುರ ತಾಲ್ಲೂಕುಗಳಲ್ಲಿ ಯಾವ ಕಾಂಗ್ರೆಸ್ ಮುಖಂಡರನ್ನೂ ಕೇಳಿಲ್ಲ ಎಂದರೆ ತಾವು ಒಪ್ಪಿಕೊಳ್ಳುತ್ತೀರಾ ?

ಶ್ರೀ ಟಿ. ಚನ್ನಯ್ಯ.—ನಾವು ಎಲ್ಲಾ ತಾಲ್ಲೂಕು ಗಳಿಂದಲೂ ಎಲ್ಲಾ ಕಾಂಗ್ರೆಸ್ ಸಮಿತಿಗಳನ್ನೂ ಕೇಳಿ ಇವುಗಳನ್ನು ರಚಿಸಿಲ್ಲ. ಕೆಲವು ಕಡೆ ಕೇಳಿದ್ದೇವೆ. ಮತ್ತೆ ಕೆಲವು ಕಡೆ ಲೋಕಲ್ ಆಫೀಸರ ಅಭಿಪ್ರಾಯ ಪಡೆದು ರಚಿಸಲಾಗಿದೆ.

ಶ್ರೀ ಎ. ಮುನಿಯಪ್ಪ.—ಜಂಗಮ ಕೋಟೆ ಹೋಬಳಿಯಲ್ಲೇ ಮೇಲೂರಿನಲ್ಲಿ ನಾಲ್ಕು ಜನರನ್ನೂ ಮತ್ತು ಈ ಹೋಬಳಿಯ ಇತರ ಗ್ರಾಮಗಳಿಂದ ಐದು ಜನರನ್ನೂ ಹೀಗೆ ಒಟ್ಟಾಗಿ ಒಂದೇ ಹೋಬಳಿಯಿಂದ ಒಂಭತ್ತು ಜನರನ್ನು ತೆಗೆದುಕೊಂಡಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.—ಇರಬಹುದು.

ಶ್ರೀ ಎ. ಮುನಿಯಪ್ಪ.—ಹಾಗೆ ಮಿಕ್ಕ ಕಡೆಗಳಲ್ಲಿರ ತಕ್ಕವರನ್ನೆಲ್ಲಾ ಬಿಟ್ಟು ಬಿಡಲು ಕಾರಣವೇನು ?

ಶ್ರೀ ಟಿ. ಚನ್ನಯ್ಯ.—ಅವಶ್ಯಕತೆ ಕಂಡು ಬರಲಿಲ್ಲ ವೆಂದು ಕಾಣುತ್ತದೆ. ಎಲ್ಲೆಲ್ಲಿ ಅವಶ್ಯಕತೆ ಇತ್ತೆಂದು ಕಂಡು ಬಂದಿದೆಯೋ ಅಂಥ ಕಡೆಗಳಲ್ಲಿ ಮಾತ್ರ ಹೆಚ್ಚು ಜನಗಳನ್ನು ತೆಗೆದುಕೊಂಡಿದ್ದಾರೆ.

ಶ್ರೀ ಎ. ಮುನಿಯಪ್ಪ.—ಈ ಸಮಿತಿಗಳಿಗೆ ಖಾಯಂ ಛೇರ್ಮನ್ನರನ್ನು ನೇಮಿಸಿದರೆ ಸರ್ಕಾರಕ್ಕೆ ಉಂಟಾಗ ತಕ್ಕ ಅಡ್ಡಿ ಆತಂಕಗಳೇನು ?

ಶ್ರೀ ಟಿ. ಚನ್ನಯ್ಯ.—ಈಗ ಸದ್ಯಕ್ಕೆ ಈ ತಾಲ್ಲೂಕು ಸಮಿತಿಗಳನ್ನು ಒಂದು ವರ್ಷ ಕಾಲದವರಿಗೆ ಮಾತ್ರ ಹಂಗಾಮಿಯಾಗಿ ಮಾಡಿರುವುದರಿಂದಲೂ ಮತ್ತು ಖಾಯಂ ಛೇರ್ಮನ್ನರನ್ನು ನೇಮಿಸುವುದರಿಂದ ಹೆಚ್ಚಿನ ಖರ್ಚು ವೆಚ್ಚಗಳು ಸಂಭವಿಸುವುದರಿಂದಲೂ ಇದನ್ನು ಕೈಬಿಡಲಾಗಿದೆ. ಈಗ ಸದ್ಯಕ್ಕೆ ಈ ತಾಲ್ಲೂಕು ಅಭಿವೃದ್ಧಿ ಸರಿ ಸಮಿತಿಗಳ ಕೆಲಸಕಾರ್ಯಗಳನ್ನೆಲ್ಲಾ ಆಯಾಯ ಸಮಿತಿಯ ಸದಸ್ಯರುಗಳೂ ಮತ್ತು ಛೇರ್ಮನ್ನರುಗಳೂ ಖಾನಗಿಯಾಗಿ ಮಾಡಬೇಕೆಂದಿದೆ. ಮತ್ತು ಸಮಿತಿ ಯಲ್ಲಿರತಕ್ಕಂಥ ಎಲ್ಲ ಸದಸ್ಯರಿಗೂ ಛೇರ್ಮನ್ನರಾಗು ವುದಕ್ಕೆ ಒಂದು ಅವಕಾಶ ಕಲ್ಪಿಸಬೇಕೆಂಬ ಉದ್ದೇಶ ದಿಂದ ಈಗ ಈ ರೀತಿ ಮಾಡಿದ್ದೇವೆ.

ಶ್ರೀ ಎ. ಮುನಿಯಪ್ಪ.—ಈಗ ಯಾವುದಾದರೂ ಇಂಥ ಒಂದು ಸಮಿತಿಗೆ ಖಾಯಂ ಛೇರ್ಮನ್ನರು ಇಲ್ಲ ದಿರುವಂಥ ನಿದರ್ಶನಗಳಿದ್ದರೆ ತಿಳಿಸುತ್ತೀರಾ ?

ಶ್ರೀ ಟಿ. ಚನ್ನಯ್ಯ.—ನೋಟೀಸ್.

ಶ್ರೀ ಎ. ಮುನಿಯಪ್ಪ.—ಹಾಗಿದ್ದರೆ ಈ ಸಮಿತಿ ಗಳಿಗೆ ಮಾತ್ರ ಖಾಯಂ ಛೇರ್ಮನ್ನರಿರಬಾರದೆಂದು ತಾವು ಹೇಳುತ್ತೀರಾ ?

ಶ್ರೀ ಟಿ. ಚನ್ನಯ್ಯ.—ಅಲ್ಲಿ ನೇರತಕ್ಕಂಥಾ ಸದಸ್ಯ ರಲ್ಲೇ ಒಬ್ಬರನ್ನು ಅವರು ಪ್ರತಿ ಮಿಟಂಗಿಗೂ ಛೇರ್ಮ ನ್ನರನ್ನಾಗಿ ಆರಿಸಿಕೊಂಡರೆ ಅಲ್ಲಯ ಕೆಲಸ ಕಾರ್ಯ ಗಳು ನಿಷ್ಪಕ್ಷಪಾತವಾಗಿ ನಡೆಯುತ್ತವೆ, ಸುಲಭವಾಗಿ ತೀರ್ಮಾನವಾಗುತ್ತವೆಂದೂ ಹಾಗೆ ಮಾಡದೆ ಒಬ್ಬ ಖಾಯಂ ಛೇರ್ಮನ್ನರನ್ನು ನೇಮಕ ಮಾಡಿದಲ್ಲಿ ಅನಾನು ಕೂಲವಾಗಬಹುದೆಂದೂ ಹಾಗೆ ಮಾಡಲಿಲ್ಲ. ಎಲ್ಲರಿಗೂ ಒಂದು ಅವಕಾಶ ಸಿಕ್ಕುವ ಹಾಗಿರಲೆಂದು ಈ ರೀತಿ ಮಾಡಿದೆ.

ಶ್ರೀ ಎ. ಮುನಿಯಪ್ಪ.—ಹಾಗೆ ಒಬ್ಬರು ಖಾಯಂ ಛೇರ್ಮನ್ನರು ಇಲ್ಲದಿದ್ದಲ್ಲಿ ಈ ಪಾಂಚವರ್ಷಿಕ ಯೋಜ ನೆಯ ಕೆಲಸಕಾರ್ಯಗಳು ಸುಗಮವಾಗಿ ನೇರವೇರುವು ದಿಲ್ಲವೆಂದು ಹೇಳಿದರೆ ಅದಕ್ಕೆ ಸರ್ಕಾರದವರ ಅಭಿ ಪ್ರಾಯವೇನು ?

ಶ್ರೀ ಟಿ. ಚನ್ನಯ್ಯ.—ಸರ್ಕಾರದಲ್ಲಿರತಕ್ಕ ಪ್ರತಿ ಯೊಂದು ಇಲಾಖೆಯಲ್ಲಿರುವ ಜನರ ಸಹಾಯ ಪಡೆದು ಕೆಲಸಕಾರ್ಯ ಮಾಡಿ ಎಂದರೆ ಅದಕ್ಕೆ ನೀವು ಸಹಕಾರ ನೀಡುವುದಿಲ್ಲ; ಆ ರೀತಿ ಕೆಲಸಕಾರ್ಯ ಮಾಡುವುದಕ್ಕೆ ನಮಗೆ ಮನಸ್ಸಿಲ್ಲ ಎಂದು ಹೇಳಿದರೆ ಅದಕ್ಕೆ ನಾವಿ ನ್ನೇನು ಮಾಡೋಣ ?

Taluk Advisory Committees (Incomes).

Q.—296. **Sri T. C. BASAPPA** (Tarikere).—

Will the Government be pleased to state :—

(*a*) when the order was issued for the first time for the constitution of Taluk Advisory Committees ;

(*b*) when the said Committees were actually constituted ;

(*c*) what items of income are permitted to be utilised for expenditure by the said Committees ?

A.—**Sri T. CHANNIAH** (Minister for Public Health and Local Self-Government).—

(*a*) 11th July 1953.

(*b*) 2nd August 1955.

(*c*) No separate funds are placed at the disposal of the Committees. The works recommended by them will be executed out of the budget grants of the department concerned.

ಶ್ರೀ ಟಿ. ಸಿ. ಬಸಪ್ಪ.—(ಸಿ) ಭಾಗಕ್ಕೆ ಕೊಟ್ಟಿರುವ ಉತ್ತರಕ್ಕನುಗುಣವಾಗಿ ಯಾವ ಬಾಬಿಗೆ ಯಾವ ಯಾವ ಇಲಾಖೆಯಲ್ಲಿ ಎಷ್ಟೆಷ್ಟು ಹಣವಿದೆ ಎನ್ನುವುದನ್ನು ತಿಳಿಸುತ್ತೀರಾ ?

ಶ್ರೀ ಟಿ. ಚನ್ನಯ್ಯ.—ಆ ರೀತಿ ಬಜೆಟ್ ಅಲಾಟ್ ಮೆಂಟೇನೂ ಮಾಡಿಲ್ಲ. ಈ ಬಗ್ಗೆ ಸರ್ಕಾರದವರು ಆಗಸ್ಟ್ 2 ರಲ್ಲಿ ಒಂದು ಆರ್ಡರನ್ನು ಮಾತ್ರ ಹೊರಡಿಸಿ ದ್ದಾರೆ. ತಮಗೆ ಬಾಕಿ ವಿಚಾರಗಳು ಬೇಕಾಗಿದ್ದರೆ ಆಮೇರೆ ಹೇಳುತ್ತೇನೆ.

ಶ್ರೀ ಟಿ. ಸಿ. ಬಸಪ್ಪ.—ಡಿಸ್ಟ್ರಿಕ್ಟ್ ಬೋರ್ಡು ಆಕ್ಟನ್ನು ಅಮೆಂಡ್ ಮಾಡುವಾಗ ಈ ತಾಲ್ಲೂಕು ಡೆವಲಪ್‌ಮೆಂಟ್ ಸಮಿತಿಗಳಿಗೆ ಕೊಡತಕ್ಕ ಮೊಬಲಗಿನ ಬಗ್ಗೆ ಹೇಳಿದ್ದ ವಿಚಾರದಲ್ಲಿ ಏನಾದರೂ ಸರ್ಕಾರ ಸೂಚನೆ ಕೊಟ್ಟಿದೆಯೇ ?

ಶ್ರೀ ಟಿ. ಚನ್ನಯ್ಯ.—ಅದು ಆ ಆಕ್ಟಿನಲ್ಲೇ ಇದೆ.

ಶ್ರೀ ಟಿ. ಸಿ. ಬಸಪ್ಪ.—ಆ ರೀತಿ ಅದನ್ನು ಹಂಚು ವುದಕ್ಕೆ ಜಾಗ್ರತೆ ಒಂದು ಏರ್ಪಾಡು ಮಾಡುತ್ತೀರಾ ?

Sri Kadidal MANJAPPA.—We are examining the question. We are going to take a decision very shortly.

ಶ್ರೀ ಟಿ. ಹನುಮಯ್ಯ.—ಈ ತಾಲ್ಲೂಕು ಅಡ್ವೈಜರಿ ಸಮಿತಿಗಳಲ್ಲಿ ಎಲ್ಲರಿಗೂ ಒಂದು ಸಮಾನಾವಕಾಶ ಕೊಡದಿರಲು ಹೀಗೆ ಮಾಡಿದ್ದೇವೆಂದು ಹೇಳಿದ್ದೀರಿ. ಈ ರೀತಿ ಸಮಾನಾವಕಾಶ ಕೊಡಬೇಕೆಂದಿರುವುದು ಈ ಸಮಿತಿಗಳೊಂದರಲ್ಲಿ ಮಾತ್ರವೇನೋ ಅಥವಾ ಇತರ ಸಮಿತಿಗಳಲ್ಲೂ ಉಂಟೋ ?